ಅ.ದಾ. ನಂ. 90/17 ಡಿ .ಡಬ್ಲ್ಯೂ-1

ದಿನಾಂಕಃ 12.01.2026 ರಂದು ಡಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಬಿ.ಡಿ.ಎಸ್. ವಕೀಲರಿಂದಃ**

1. ನಾನು ಎಸ್.ಎಸ್.ಎಲ್.ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ತಕರಾರಿನ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ದಾವಾ ಸ್ವತ್ತಿನ ಬಗ್ಗೆ ತಿಳಿದುಕೊಂಡಿದ್ದೀರ ಎಂದರೆ ಸ್ವಲ್ಪ ತಿಳಿದುಕೊಂಡಿರುತ್ತೇನೆ. ನನ್ನ ತಾತನ ಹೆಸರು ಕಾಳೇಗೌಡ ಎಂದರೆ ಸರಿ. ಕಾಳೇಗೌಡರವರಿಗೆ 6 ಜನ ಮಕ್ಕಳು ಎಂದರೆ ಸರಿ. ಸದರಿ ವಾದಿಗಳು ಮತ್ತು 3 ಮತ್ತು 4ನೇ ಪ್ರತಿವಾದಿಗಳು, ನನ್ನ ತಂದೆ ಕಾಳೇಗೌಡರವರ ಮಕ್ಕಳು ಎಂದರೆ ಸರಿ. ದಾವಾ ಸ್ವತ್ತನ್ನು ಹೊರತುಪಡಿಸಿ ಉಳಿದ ಪಿತ್ರಾರ್ಜಿತ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಮ್ಮ ಕುಟುಂಬದಲ್ಲಿ ಪಾಲು ಪಾರಿಕತ್ತು ಆಗಿದೆ ಎಂದರೆ ಸರಿ. ದಾವಾ ಸ್ವತ್ತು ಹೆಚ್.ಆರ್.ಪಿ. ಮುಳುಗಡೆ ಸಂತ್ರಸ್ತರಿಗೆ ನೀಡಿದಂತಹ ಸ್ವತ್ತು ಆಗಿರುತ್ತದೆ ಎಂದರೆ ಸರಿ. ಯಾವ ಜಮೀನು ಮುಳುಗಡೆ ಆದ ಕಾರಣಕ್ಕೆ ದಾವಾ ಸ್ವತ್ತು ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಅಥವಾ ತಾತನ ಹೆಸರು ಅಥವಾ ಯಾರ ಹೆಸರಿನಲ್ಲಿರುವ ಜಮೀನು ಮುಳುಗಡೆಯಾಗಿರುತ್ತದೆ ಎಂದರೆ ಗೊತ್ತಿಲ್ಲ.

2. ಹುಣಸೆ ಗ್ರಾಮದ ಸ.ನಂ.17/2 ಕಾಳೇಗೌಡರವರ ಹೆಸರಿನಲ್ಲಿರುತ್ತದೆ ಎಂದರೆ ಗೊತ್ತಿಲ್ಲ. ಸ.ನಂ.17/2 ರ 1 ಎಕರೆ 5 ಗುಂಟೆ ಜಮೀನು ಹೇಮಾವತಿ ಜಲಾಶಯ ಯೋಜನೆಗೆ ಭೂ ಸ್ವಾಧೀನವಾಗಿರುತ್ತದೆ ಎಂದರೆ ಗೊತ್ತಿಲ್ಲ. ವಾದ ಪತ್ರದಲ್ಲಿರುವ ಅಂಶಗಳನ್ನು ತಿಳಿದುಕೊಂಡಿರುತ್ತೇನೆ. ಸ.ನಂ.17/2 ರಲ್ಲಿ 1 ಎಕರೆ 5 ಗುಂಟೆ ಹೆಚ್.ಆರ್.ಪಿ.ಯಲ್ಲಿ ಭೂ ಸ್ವಾಧೀನವಾದ ಕಾರಣ ಅದರ ಪರಿಹಾರವಾಗಿ ದಾವಾ ಸ್ವತ್ತನ್ನು ಮಂಜೂರು ಮಾಡಲಾಗಿರುತ್ತದೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ.ನಂ.17/2 1 ಎಕರೆ 5 ಗುಂಟೆ ಭೂ ಸ್ವಾಧೀನವಾದ ಪರಿಹಾರದ ಹಣವನ್ನು ವಾದಿಯರು, 3ನೇ ಪ್ರತಿವಾದಿ ಮತ್ತು ನನ್ನ ತಂದೆ ಒಟ್ಟಾಗಿ ಪಡೆದುಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ವಿಚಾರ ಗೊತ್ತಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ದಾವಾ ಸ್ವತ್ತು ನನ್ನ ತಂದೆಯ ಸ್ವಯಾರ್ಜಿತ ಸ್ವತ್ತು ಎಂದು ತೋರಿಸಲು ದಾಖಲಾತಿ

ಹಾಜರುಪಡಿಸಿರುತ್ತೇನೆ. ದಾವಾ ಸ್ವತ್ತು ನನ್ನ ತಂದೆಗೆ ಹೆಚ್.ಆರ್.ಪಿ. ಯಲ್ಲಿ ಭೂ ಸ್ವಾಧೀನವಾದ ಪರಿಹಾರವಾಗಿ ಮಂಜೂರು ಮಾಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಿಡಿ 1 ರ ಪ್ರಕಾರ ಯಾವ ಪ್ರಾಧಿಕಾರ ನನ್ನ ತಂದೆಗೆ ಮಂಜೂರು ಮಾಡಿರುತ್ತಾರೆ ಎಂದರೆ ವಿಶೇಷ ಭೂ ಸ್ವಾಧೀನ ಅಧಿಕಾರಿಗಳು. ನನ್ನ ತಾತನ ಹೆಸರಿನಲ್ಲಿರುವ ಜಮೀನು ಮುಳುಗಡೆಯಾದ ಅಧಾರದ ಮೇಲೆ ದಾವಾ ಸ್ವತ್ತು ನನ್ನ ತಂದೆಗೆ ಮಂಜೂರಾಗಿರುತ್ತದೆ ಎಂದರೆ ಗೊತ್ತಿಲ್ಲ. ನನ್ನ ತಂದೆ ಹೆಸರಿನಲ್ಲಿರುವ ಯಾವುದೇ ಸ್ವತ್ತು ಹೆಚ್.ಆರ್.ಪಿ. ಯೋಜನೆಗೆ ಮುಳುಗಡೆಯಾಗಿರುವುದಿಲ್ಲ ಎಂದರೆ ಗೊತ್ತಿಲ್ಲ. ಸದರಿ ವಿಚಾರಗಳು ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ವಾದಿಗಳಿಗೂ ಹಿಸ್ಸಾ ಹಕ್ಕಿರುತ್ತದೆ ಎಂದರೆ ಸರಿಯಲ್ಲ. ನಾವು ಬೇರೆಯಾದ ನಂತರ ಮಾಡಿಕೊಂಡಿರುವ ಆಸ್ತಿಯಾಗಿರುತ್ತದೆ. ದಾವಾ ಸ್ವತ್ತು ವಾದಿ ಮತ್ತು ಪ್ರತಿವಾದಿಗಳ ಒಟ್ಟು ಕುಟುಂಬದ ಸ್ವತ್ತಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತಂದೆ ಬದುಕಿದ್ದಾಗಲೂ ವಾದಿಗಳು ಹಿಸ್ಸೆ ಕೇಳುತ್ತಿದ್ದರು, ನೀಡುತ್ತೇವೆ ಎಂದು ಮುಂಡೂಡುತ್ತಾ ಬಂದಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

(ಸ್ನೇಹ ಎಂ.)
ವ್ಯವಹಾರ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ., ಆಲೂರು.